**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂ:ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017–18

**ನಿರ್ದೇಶಕರ ಕಛೇರಿ,**
ತಾಂತ್ರಿಕ ಶಿಕ್ಷಣ

ನಿರ್ದೇಶನಾಲಯ,

ಅರಮನೆ ರಸ್ತೆ,
ಬೆಂಗಳೂರು
ದಿನಾಂಕ:15.7.2017

## ಸುತ್ತೋಲೆ

ವಿಷಯ: **Life skills and counseling services ತರಬೇತಿಗೆ ಸರ್ಕಾರಿ ಪಾಲಿಟೆಕ್ನಿಕ್‌ಗಳ ಬೋಧಕ ಸಿಬ್ಬಂದಿಯವರನ್ನು ನಿಯೋಜಿಸುವ ಬಗ್ಗೆ.**

ಉಲ್ಲೇಖ: **ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ನಿಮ್ಹಾನ್ಸ್/2017–18/144 ದಿ: 14.7.2017**

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನಲ್ಲಿರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳು ಮಾನ್ಯತಾ ಮೌಲ್ಯಮಾಪನಕ್ಕೆ ತಯಾರಿ ನಡೆಸುತ್ತಿದ್ದು, ಸದರಿ ವಿಷಯಕ್ಕೆ ಅನುಕೂಲವಾಗುವಂತೆ **ಪ್ರತಿ ಸಂಸ್ಥೆಯಿಂದ ಆಸಕ್ತಿಯುಳ್ಳ** ಸಿಬ್ಬಂದಿ ವರ್ಗದವರು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ **ದಿ: 17.7.2017 ರಿಂದ 22.7.2017 (6 ದಿನಗಳು)** ರವರೆಗೆ ನಡೆಸಲಾಗುತ್ತಿರುವ ***"ಜೀವನ ಕೌಶಲ್ಯ ಮತ್ತು ಸಮಾಲೋಚನಾ ಸೇವೆಗಳ"*** ಕುರಿತು ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ. ಈ ಮೂಲಕ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮೌಲ್ಯಮಾಪನಕ್ಕೆ ಒಳಪಡುವ ಸಂಸ್ಥೆಗಳಿಗೆ ಈ ತರಬೇತಿಯು ಉಪಯುಕ್ತವಾಗಿರುತ್ತದೆ ಎಂದು ಆಶಿಸಲಾಗಿದೆ. ಪ್ರಾಚಾರ್ಯರು ತಮ್ಮ ಸಂಸ್ಥೆಗಳ ಸಿಬ್ಬಂದಿಯವರ ವಿವರಗಳನ್ನು https://goo.gl/forms/5hGPVr9pJk0am6wT2 (Google form) ಮೂಲಕ **ದಿನಾಂಕ:15.7.2017ರ** ಒಳಗಾಗಿ ತಪ್ಪದೇ ಭರ್ತಿಮಾಡಿಸಿ ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ.

ಸದರಿ ತರಬೇತಿಯು ಬೆಂಗಳೂರಿನಲ್ಲಿರುವ NIMHANS, ಸಂಸ್ಥೆಯಲ್ಲಿಯೇ ಪ್ರಯಾಣ ಭತ್ಯೆ, ದಿನಭತ್ಯೆ, ವಸತಿ ಮತ್ತು ಊಟದ ವ್ಯವಸ್ಥೆಯೊಂದಿಗೆ ನಡೆಸಲಾಗುತ್ತಿರುವುದರಿಂದ ಭಾಗವಹಿಸುವವರು ಕಡ್ಡಾಯವಾಗಿ 6 ದಿನಗಳ ಕಾಲ ಅಲ್ಲಿಯೇ ಉಳಿದುಕೊಂಡು ತರಬೇತಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿ:–

1) ಎಲ್ಲಾ ಜಂಟಿ ನಿರ್ದೇಶಕರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಪ್ರಾಚಾರ್ಯರುಗಳು, ಸರ್ಕಾರಿ/ಅನುದಾನಿತ ಸಂಸ್ಥೆಗಳು, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3) ಡಾ. ಪ್ರದೀಪ್ ಬಿ.ಎಸ್, ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್, ಲಕ್ಕಸಂದ್ರ, ಬೆಂಗಳೂರು–560029 ಇವರ ಸೂಕ್ತ ಕ್ರಮಕ್ಕಾಗಿ
4) ರಾಜ್ಯ ಸಂಪರ್ಕಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರ ಮಾಹಿತಿಗಾಗಿ
5) ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು–560004 ಇವರ ಮಾಹಿತಿಗಾಗಿ
6) ಇ–ಆಡಳಿತ, ಸಂಯೋಜಕರು, ಸೂಕ್ತ ಕ್ರಮಕ್ಕಾಗಿ
7) ಕಛೇರಿ ಕಡತಕ್ಕೆ